## 6.5 ಉದ್ಯಮ ಚಕ್ರಗಳ ಹಂತಗಳು

## (Phases of Business Cycles)

ಅರ್ಥವ್ಯವಸ್ಥೆಯಲ್ಲಿ ಸಂಭವಿಸುವ ಉದ್ಯಮ ಚಕ್ರಗಳು ಸಮುದ್ರದ ಅಲೆಗಳ ರೀತಿಯಲ್ಲಿ ಸಂಭವಿಸುವ ಘಟನೆಗಳಾಗಿವೆ ಹೀಗಾಗಿ ಅವುಗಳಲ್ಲಿ ಏಕರೂಪತೆ ಎಂಬದು ಇರುವುದಿಲ್ಲ. ಒಮ್ಮೆ ಆರ್ಥಿಕ ಚಟುವಟಿಕೆಗಳಲ್ಲಿ ಏರಿಕೆ ಕಂಡರೆ ಇನ್ನೊಮ್ಮೆ ಇಳಿಕೆ ಕಾಣುತ್ತದ ಸಾಮಾನ್ಯವಾಗಿ ಉದ್ಯಮ ಚಕ್ರವನ್ನು ಐದು ಹಂತಗಳಾಗಿ ವಿಂಗಡಿಸಲಾಗುತ್ತದೆ. ಅವುಗ ಈ ಕೆಳಗಿನಂತಿವೆ.

1. ಮುಗ್ಗಟ್ಟು
2. ಚೇತರಿಕೆ
3. ಸಮೃದ್ಧಿ
4. ಉತ್ತುಂಗ
5. ಹಿಂಜರಿತ

Scanned with CamScanner

ಉದ್ಯಮ ಚಕ್ರಗಳ ಈ ವಿವಿಧ ಹಂತಗಳನ್ನು ಕೆಳಗಿನ ರೇಖಾಚಿತ್ರದಲ್ಲಿ ತೋರಿಸಲಾಗಿದೆ.




ರೇಖಾಚಿತ್ರ 6.1

ಮೇಲಿನ ರೇಖಾಚಿತ್ರದಲ್ಲಿ OX ಅಕ್ಷದ ಮೇಲೆ ಸಮಯವನ್ನು ಮತ್ತು OY ಅಕ್ಷದ ಮೇಲೆ ಆರ್ಥಿಕ ಚಟುವಟಿಕೆಗಳನ್ನು ತೋರಿಸಲಾಗಿದ್ದು, EE° ರೇಖೆಯು ಆರ್ಥಿಕ ಚಟುವಟಿಕೆಗಳಲ್ಲಿನ ಏಕರೂಪದ ಬೆಳವಣಿಗೆಯ ದಿಶೆಯನ್ನು ತೋರಿಸುವ ರೇಖೆಯಾಗಿದೆ. BC ರೇಖೆಯು ಆರ್ಥಿಕ ಚಟುವಟಿಕೆಗಳಲ್ಲಿನ ಚಕ್ರಾಕಾರದ ಏರಿಳಿತಗಳನ್ನು ತೋರಿಸುವ ಒಂದು ಉದ್ಯಮ ಚಕ್ರವಾಗಿದೆ. ಆರ್ಥಿಕ ಮುಗ್ಗಟ್ಟಿನೊಂದಿಗೆ ಆರಂಭವಾಗುವ ಒಂದು ಸಾಮಾನ್ಯ ವ್ಯಾಪಾರ ಚಕ್ರವು ಚೇತರಿಕೆ, ಸಮೃದ್ಧಿ, ಉತ್ತುಂಗ, ಹಿಂಜರಿತದ ಹಂತಗಳನ್ನು ದಾಟುತ್ತಾ ಹೋಗಿ ಕೊನೆಗೆ ಮತ್ತೆ ಮುಗ್ಗಟ್ಟಿನ ಸ್ಥಿತಿಯನ್ನು ತಲುಪುತ್ತದೆ. ಉದ್ಯಮ ಚಕ್ರದ ಈ ವಿವಿಧ ಹಂತಗಳ ವಿವರಣೆಯನ್ನು ಕೆಳಗೆ ವಿವರಿಸಲಾಗಿದೆ.

## 1. ಮುಗ್ಗಟ್ಟು (Depression)

ಮುಗ್ಗಟ್ಟಿನ ಹಂತವು ಸಾಮಾನ್ಯ ಉದ್ಯಮ ಚಕ್ರದ ಆರಂಭಿಕ ಹಂತವೆಂದು ಹೇಳಬಹುದು. ಈ ಹಂತದಲ್ಲಿ ಇಡಿ ಅರ್ಥವ್ಯವಸ್ಥೆಯಲ್ಲಿ ಆರ್ಥಿಕ ಚಟುವಟಿಕೆಗಳು ಅತ್ಯಂತ ಕೆಳಮಟ್ಟದಲ್ಲಿ ನಡೆಯುತ್ತಿರುತ್ತವೆ. ಉತ್ಪಾದನೆ, ಉದ್ಯೋಗ, ಹೂಡಿಕೆ, ಬೆಲೆಗಳು ಹೀಗೆ ಯಾವುದೇ ಆರ್ಥಿಕ ಪರಿಮಾಣವನ್ನು ತೆಗೆದುಕೊಂಡರು ಅವುಗಳು ಸಾಮಾನ್ಯ ಮಟ್ಟಕ್ಕಿಂತ ಕೆಳಗೆ ಇರುತ್ತವೆ. ಇದರ ಪರಿಣಾಮವಾಗಿ ಇಡಿ ಅರ್ಥವ್ಯವಸ್ಥೆಯಲ್ಲಿ ನಿರಾಶೆಯ ಭಾವನೆ ಮನೆಮಾಡಿರುತ್ತದೆ. ಬೆಲೆಗಳ ಕುಸಿತವು ಲಾಭದ ಕುಸಿತ ತನ್ಮೂಲಕ ಹೂಡಿಕೆಯ ಕುಸಿತಕ್ಕೆ ಕಾರಣವಾಗುತ್ತದೆ, ನೆಲಕಚ್ಚಿದ ಬಂಡವಾಳ ಹೂಡಿಕೆಯಿಂದಾಗಿ ಉದ್ಯೋಗಾವಕಾಶಗಳು ಸೃಷ್ಟಿಯಾಗದೆ ವ್ಯಾಪಕ ನಿರುದ್ಯೋಗವು ಮನೆಮಾಡಿರುತ್ತದೆ.

Scanned with CamScanner

## 2. ಚೇತರಿಕೆ (Revival)

ಮುಗ್ಗಟ್ಟಿನ ನಂತರ ಬರುವ ಈ ಹಂತವು ಆರ್ಥಿಕ ಚಟುವಟಿಕೆಗಳಲ್ಲಿನ ಚೇತರಿಕೆಯನ್ನು ಪ್ರತಿನಿಧಿಸುತ್ತದೆ. ಮುಗ್ಗಟ್ಟಿನಿಂದಾಗಿ ನೆಲಕಚ್ಚಿದ್ದ ಆರ್ಥಿಕ ಚಟುವಟಿಕೆಗಳು ಈ ಹಂತದಲ್ಲಿ ನಿಧಾನವಾಗಿ ಚೇತರಿಸಿಕೊಳ್ಳಲು ಪ್ರಾರಂಭಿಸುತ್ತವೆ. ಆಂತರಿಕ ಅಥವಾ ಬಾಹ್ಯ ಅಂಶಗಳು ಅರ್ಥ ವ್ಯವಸ್ಥೆಯಲ್ಲಿ ಆರ್ಥಿಕ ಚಟುವಟಿಕೆಗಳ ಚೇತರಿಕೆಗೆ ಕಾರಣೀಭೂತವಾಗುತ್ತವೆ. ಈ ಚೇತರಿಕೆಯು ಉತ್ಪಾದಕರಲ್ಲಿ ಆತ್ಮವಿಶ್ವಾಸವನ್ನು ತುಂಬಿ ಹೊಸದಾಗಿ ಸಣ್ಣ ಪ್ರಮಾಣದ ಬಂಡವಾಳ ಹೂಡಿಕೆಗೆ ಪ್ರೋತ್ಸಾಹ ನೀಡುತ್ತದೆ, ತತ್ಪರಿಣಾಮವಾಗಿ ಉದ್ಯೋಗ, ಉತ್ಪಾದನೆ, ಬೆಲೆಗಳು, ಲಾಭದ ಪ್ರಮಾಣದಲ್ಲಿ ಏರಿಕೆಯುಂಟಾಗುತ್ತದೆ. ಇದು ಹೂಡಿಕೆದಾರರಲ್ಲಿ ಇನ್ನಷ್ಟು ಆತ್ಮವಿಶ್ವಾಸವನ್ನು ತುಂಬಿ ಹೊಸದಾಗಿ ಸಣ್ಣ ಪ್ರಮಾಣದ ಬಂಡವಾಳ ಹೂಡಿಕೆಗೆ ಪ್ರೋತ್ಸಾಹ ನೀಡುತ್ತದೆ. ಇದರಿಂದಾಗಿ ಆರ್ಥಿಕ ಚಟುವಟಿಕೆಗಳಲ್ಲಿ ಚೈತನ್ಯವು ತುಂಬಿ ಅರ್ಥ ವ್ಯವಸ್ಥೆ ಮುಗ್ಗಟ್ಟಿನ ಸ್ಥಿತಿಯಿಂದ ಮೇಲೇಳಲು ಪ್ರಾರಂಭಿಸುತ್ತದೆ.

## 3. ಸಮೃದ್ಧಿ (Prosperity)

ಚೇತರಿಕೆಯ ಹಂತದಲ್ಲಿ ಮೇಲೇಳಲ್ಪಟ್ಟ ಆರ್ಥಿಕ ಚಟುವಟಿಕೆಗಳು ಪ್ರಬುದ್ಧತೆಯತ್ತ ಸಾಗುವ ಹಂತವೆ ಸಮೃದ್ಧಿಯಾಗಿದೆ. ಈ ಹಂತದಲ್ಲಿ ಬಂಡವಾಳ ಹೂಡಿಕೆ, ಉದ್ಯೋಗದ ಮಟ್ಟ, ಉತ್ಪಾದನೆಯ ಪ್ರಮಾಣ, ಲಾಭದ ಪ್ರಮಾಣ ಇತ್ಯಾದಿಗಳೆಲ್ಲದರಲ್ಲೂ ಕ್ಷಿಪ್ರ ಏರಿಕೆಯುಂಟಾಗುತ್ತದೆ. ಇದರ ಪರಿಣಾಮವಾಗಿ ಅರ್ಥವ್ಯವಸ್ಥೆಯಲ್ಲಿ ಆಶಾವಾದವು ಎಲ್ಲೆಡೆ ವ್ಯಾಪಿಸಿ ಆರ್ಥಿಕ ಚಟುವಟಿಕೆಗಳು ಉನ್ನತಮಟ್ಟದಲ್ಲಿ ನಡೆಯುತ್ತಿರುತ್ತವೆ. ಈ ಹಂತದಲ್ಲಿ ಅರ್ಥವ್ಯವಸ್ಥೆ ಪೂರ್ಣೋದ್ಯೋಗದ ಸ್ಥಿತಿಯನ್ನು ತಲುಪುತ್ತದೆ.

## 4. ಉತ್ತುಂಗ (Peak)

ಉತ್ತುಂಗವನ್ನು 'ಶಿಖರ' ಎಂದೂ ಕರೆಯುತ್ತಾರೆ. ಸಮೃದ್ಧಿಯ ಹಂತದಲ್ಲಿ ಭರದಿಂದ ಸಾಗಿದ ಆರ್ಥಿಕ ಚಟುವಟಿಕೆಗಳು ಸ್ಥಿರವಾಗಿ ನಿಲ್ಲದೆ ಅರ್ಥವ್ಯವಸ್ಥೆಯನ್ನು ಉತ್ತುಂಗ ಶಿಖರಕ್ಕೆ ಕೊಂಡಯುತ್ತವೆ. ಈ ಹಂತವನ್ನು 'ಪೂರ್ಣೋದ್ಯೋಗ ಮಟ್ಟ ಮೀರಿದ ಹಂತ' (Over Full Employment). 'ಮಹಾಸಮೃದ್ಧಿ' (Great Prosperity) ಯ ಹಂತವೆಂದೂ ಕರೆಯಲಾಗುತ್ತದೆ. ಉತ್ತುಂಗ ಹಂತದಲ್ಲಿ ಎಲ್ಲಾ ಆರ್ಥಿಕ ಚಟುವಟಿಕೆಗಳು ಗರಿಷ್ಠ ಮಟ್ಟದಲ್ಲಿ ನಡೆಯುತ್ತಿರುತ್ತವೆ. ಉತ್ಪಾದಕರಲ್ಲಿ ಅತಿಯಾದ ಆಶಾಭಾವನೆಯು ಮನೆ ಮಾಡಿ ಅಧಿಕ ಬಂಡವಾಳ ಹೂಡಿಕೆಗೆ ಪ್ರೇರೇಪಣೆ ನೀಡುತ್ತದೆ. ಅಧಿಕ ಬಂಡವಾಳ ಹೂಡಿಕೆಯು ಆರ್ಥಿಕ ಚಟುವಟಿಕೆಗಳ ಮಿತಿ ಮೀರಿದ ವಿಸ್ತರಣೆಗೆ ಅವಕಾಶ ಮಾಡಿಕೊಡುತ್ತದೆ. ಇದರಿಂದ ಅರ್ಥವ್ಯವಸ್ಥೆಯು ತನ್ನ ಗಾತ್ರವನ್ನು ಮೀರಿ ವಿಸ್ತರಣೆ ಹೊಂದುತ್ತದೆ.

Scanned with CamScanner

## 5. ಹಿಂಜರಿಕೆ (Recession)

ಉತ್ತುಂಗ ಅಥವಾ ಶಿಖರ ಹಂತದಲ್ಲಿನ ಆರ್ಥಿಕ ಚಟುವಟಿಕೆಗಳ ಮಿತಿಮೀರಿದ ವಿಸ್ತರಣೆಯು ಮುಂದೊಂದು ದಿನ ಆರ್ಥಿಕ ಚಟುವಟಿಕೆಗಳ ಹಿನ್ನಡೆಗೆ ಕಾರಣೀಭೂತವಾದ ಅಂಶಗಳನ್ನು ತನ್ನೊಡಲೊಳಗಿಟ್ಟುಕೊಂಡು ಬೆಳೆಯುತ್ತಿರುತ್ತದೆ. ಅರ್ಥ ವ್ಯವಸ್ಥೆಯ ಉತ್ತುಂಗ ಸ್ಥಿತಿಯಿಂದ ಕೆಳಮುಖ ಚಲನೆಯು ಸ್ಥಿತಿಯನ್ನು ಹಿಂಜರಿಕೆಯ ಹಂತವೆಂದು ಕರೆಯಲಾಗುತ್ತದೆ. ಉತ್ತುಂಗ ಸ್ಥಿತಿಯಲ್ಲಿನ ಆರ್ಥಿಕ ಚಟುವಟಿಕೆಗಳಲ್ಲಿನ ಮಿತಿಮೀರಿದ ವಿಸ್ತರಣೆಯು ಅರ್ಥವ್ಯವಸ್ಥೆಯಲ್ಲಿನ ಸಂಪನ್ಮೂಲಗಳ ಮೇಲೆ ಅಧಿಕ ಒತ್ತಡವನ್ನು ಹೇರಿ ಸಂಪನ್ಮೂಲಗಳ ಕೊರತೆಯ ಸ್ಥಿತಿಯನ್ನು ಸೃಷ್ಟಿಮಾಡುತ್ತವೆ. ಇದರಿಂದ ಉತ್ಪಾದನಾಂಗಗಳ ಬೆಲೆಗಳು ವಿಪರೀತ ಏರಿ ಉತ್ಪಾದನಾ ವೆಚ್ಚವು ಹೆಚ್ಚಳವಾಗುತ್ತದೆ. ಉತ್ಪಾದನಾವೆಚ್ಚದ ಹೆಚ್ಚಳವು ಲಾಭದ ಇಳಿಕೆಗೆ ಕಾರಣವಾಗಿ ಹೂಡಿಕೆ, ಉದ್ಯೋಗದ ಮಟ್ಟ, ವರಮಾನದ ಇಳಿಕೆ, ಅನುಭೋಗದ ಕುಸಿತಕ್ಕೆ ಕಾರಣವಾಗಿ ಆರ್ಥಿಕ ಚಟುವಟಿಕೆಗಳಲ್ಲಿ ಹಿಂಜರಿಕೆ ಪ್ರಾರಂಭವಾಗುತ್ತದೆ. ಹೀಗೆ ಪ್ರಾರಂಭವಾದ ಹಿಂಜರಿಕೆಯು ಅರ್ಥ ವ್ಯವಸ್ಥೆಯನ್ನು ಮುಗ್ಗಟ್ಟಿನ ಸ್ಥಿತಿಗೆ ಕೊಂಡೊಯ್ಯುತ್ತದೆ.

Scanned with CamScanner